ಮಾಲಿನ್ಯದಿಂದ ಶಿಶುವನ್ನು ರಕ್ಷಿಸುವ ಸಲಹೆಗಳು

ಅಭಿಮತ

ಡಾ.ಸೌಮ್ಯಾ ಸಿ. ಸಿ ಮಕ್ಕಳ ತಜ್ಞರು
vveditoped@gmail.com

ಮಕ್ಕಳನ್ನು ಪಡೆಯುವುದು ಒಂದು ವರ ಮತ್ತು ಆಶೀರ್ವಾದ. ಹಾಗಾಗಿ ಪೋಷಕರಿಗೆ ನಿದ್ರೆಯಿಲ್ಲದ ರಾತ್ರಿಗಳು ಮತ್ತು ನಿರಂತರ ಕಾಳಜಿ ಇರಬೇಕಾಗುತ್ತದೆ. ಜಗತ್ತು ಪ್ರಗತಿಯಲ್ಲಿರುವಾಗ, ಮಾಲಿನ್ಯ ಮತ್ತು ಜಾಗತಿಕ ತಾಪಮಾನದಂತಹ ಸಮಸ್ಯೆಗಳೂ ಹೆಚ್ಚುತ್ತಿರುತ್ತವೆ. ಅಂತಹ ಸಂದರ್ಭದಲ್ಲಿ, ಪ್ರತಿ ಪೋಷಕರು ತಮ್ಮ ಮಕ್ಕಳನ್ನು ಮಾಲಿನ್ಯದ ಹಾನಿಕಾರಕ ಪರಿಣಾಮಗಳಿಂದ, ವಿಶೇಷವಾಗಿ ನವಜಾತ ಶಿಶುಗಳಿಂದ ಹೇಗೆ ರಕ್ಷಿಸಬೇಕೆಂದು ಚಿಂತಿತರಾಗಿದ್ದಾರೆ. ನವಜಾತ ಶಿಶುಗಳ ಪ್ರತಿರಕ್ಷಣಾ ವ್ಯವಸ್ಥೆಗಳು, ಅವರ ಶ್ವಾಸಕೋಶ ಮತ್ತು ಮೆದುಳು ಇನ್ನೂ ಬೆಳೆಯುತ್ತಿರುತ್ತವೆ. ಶಿಶುಗಳು ವಯಸ್ಕರಿಗಿಂತ ವೇಗವಾಗಿ ಉಸಿರಾಡುತ್ತವೆ, ಅಲ್ಲದೇ ಅತ್ಯಂತ ವೇಗವಾಗಿ ಮಾಲಿನ್ಯಕ್ಕೆ ಹೆಚ್ಚು ಒಳಗಾಗುತ್ತದೆ.

ನಿಮ್ಮ ಮಗುವಿಗೆ ಕೆಲವೊಮ್ಮೆ ಅಥವಾ ಆಗಾಗ ನೆಗಡಿ, ಸೀನುವಿಕೆ, ಕೆಮ್ಮು, ಸ್ರವಿಸುವ ಮೂಗು, ಕಣ್ಣುಗಳಲ್ಲಿ ಕಿರಿಕಿರಿ ಮತ್ತು ಚರ್ಮದ ದದ್ದುಗಳು ಉಂಟಾಗಬಹುದು. ನಿಮ್ಮ ನವಜಾತ ಶಿಶುವಿಗೆ ಅಲರ್ಜಿಯ ಚರ್ಮದ ಪರಿಸ್ಥಿತಿಗಳು ಅಥವಾ ಆಸ್ತಮಾದಂತಹ ಉಸಿರಾಟದ ತೊಂದರೆಗಳಿದ್ದರೆ ಈ ಲಕ್ಷಣಗಳು ಹೆಚ್ಚು ತೀವ್ರವಾಗಿರುತ್ತದೆ.

ನಿಮ್ಮ ನವಜಾತ ಶಿಶುವನ್ನು ಮಾಲಿನ್ಯದಿಂದ ಹೇಗೆ ರಕ್ಷಿಸಬೇಕು ಎಂಬುದರ ಕುರಿತು ಕೆಲವು ಸಲಹೆಗಳು ಇಲ್ಲಿವೆ –

1. ಧೂಮಪಾನವನ್ನು ತಪ್ಪಿಸಿ ಮತ್ತು ಧೂಮಪಾನಿಗಳಿಂದ ದೂರವಿರಿ – ನಿಮ್ಮ ಮನೆಯಲ್ಲಿ ಗಾಳಿಯ ಗುಣಮಟ್ಟ ಉತ್ತಮ ಗೊಳಿಸುವುದು ಮೊದಲ ಮತ್ತು ಪ್ರಮುಖ ಸಲಹೆ ಆಗಿದೆ. ಹಾಗೆ ಮಾಡಲು, ಧೂಮಪಾನ ಮತ್ತು ನಿಷ್ಕ್ರಿಯ ಧೂಮಪಾನ ತಪ್ಪಿಸಿ. ಧೂಮಪಾನದಿಂದಾಗಿ ನೈರ್ಮಲ್ಯ ಗಾಳಿಯನ್ನು ಉಸಿರಾಡುವುದರಿಂದ ನವಜಾತ ಶಿಶುವಿನ ಮೇಲೆ ಗಂಭೀರ ಪರಿಣಾಮ ಬೀರುತ್ತದೆ.
2. ಏರ್ ಪ್ಯೂರಿಫೈಯರ್ ಬಳಸಿ–ಒಳಾಂಗಣದಲ್ಲಿ ಏರ್ ಪ್ಯೂರಿಫೈಯರ್ /ವಾಯು ಶುದ್ಧೀಕರಣ/ಶುದ್ಧಿಕಾರಕ ಬ್ಯಾಕ್ಟೀರಿಯ ಮತ್ತು ಹೊಗೆಯನ್ನು ತೊಡೆದುಹಾಕುವ ಮೂಲಕ ಗಾಳಿಯ ಗುಣಮಟ್ಟವನ್ನು ಸುಧಾರಿಸಲು ಇವು ಉತ್ತಮ ಹೂಡಿಕೆಯಾಗಿದೆ. ನವಜಾತ ಶಿಶುವಿಗೆ ಕಿರಿಕಿರಿಯನ್ನು ಕಡಿಮೆ ಮಾಡಲು ಸಹ ಇದು ಸಹಾಯ ಮಾಡುತ್ತದೆ.
3. ಸುಗಂಧಭರಿತ ಉತ್ಪನ್ನಗಳು ಬೇಡ – ಏರ್‌ಫ್ರೆಶ್ನರ್‌ಗಳು, ಪರಿಮಳಯುಕ್ತ ಮೇಣದ ಬತ್ತಿಗಳು ಮತ್ತು ಮನೆಯಲ್ಲಿ ಸುಗಂಧ ದ್ರವ್ಯಗಳನ್ನು ಹೊಂದಿರುವ ಇತರ ಉತ್ಪನ್ನಗಳನ್ನು ಬಳಸುವುದನ್ನು ತಪ್ಪಿಸಿ ಏಕೆಂದರೆ ಅದು ಮಗುವಿಗೆ ಕಿರಿ ಕಿರಿ ಉಂಟಾಗಬಹುದು ಮತ್ತು ಮೇಲೆ ತಿಳಿಸಿದ ರೋಗಲಕ್ಷಣಗಳಿಗೆ ಕಾರಣವಾಗಬಹುದು. ಬಣ್ಣಗಳು, ಸುಗಂಧ ದ್ರವ್ಯಗಳು ಮತ್ತು ಕೀಟನಾಶಕಗಳನ್ನು ನವಜಾತ ಶಿಶುಗಳಿಂದ ದೂರವಿಡಬೇಕು.
4. ಮನೆಯೊಳಗೆ ಇರಿ – ನಿಮ್ಮ ನವಜಾತ ಶಿಶುವನ್ನು ನಿಮ್ಮ ಮನೆಯ ಹೊರಗೆ ತೆಗೆದುಕೊಳ್ಳದೆ ಹೊರಗಿನ ಪರಿಸರಕ್ಕೆ ಒಡ್ಡಿಕೊಳ್ಳುವುದನ್ನು ತಪ್ಪಿಸಿ, ವಿಶೇಷವಾಗಿ ನೀವು ವಾಸಿಸುವ ಮಾಲಿನ್ಯವು ಉತ್ತುಂಗದಲ್ಲಿದ್ದಾಗ.
5. ಸ್ತನ್ಯಪಾನ – ನಿಮ್ಮ ನವಜಾತ ಶಿಶುವನ್ನು ರಕ್ಷಿಸಲು, ಸ್ತನ್ಯಪಾನವು ಅವರ ರೋಗನಿರೋಧಕ ಶಕ್ತಿಯನ್ನು ಗಮನಾರ್ಹವಾಗಿ ಸುಧಾರಿಸುತ್ತದೆ. ಹಾಲುಣಿಸಿದ ಶಿಶುಗಳು ಸ್ತನ್ಯಪಾನ ರಹಿತ ಶಿಶುಗಳಿಗೆ ಹೋಲಿಸಿದರೆ ಸೌಮ್ಯ ರೋಗ ಲಕ್ಷಣಗಳನ್ನು ಅನುಭವಿಸುತ್ತಾರೆ.
6. ಉತ್ತಮ ನೈರ್ಮಲ್ಯವನ್ನು ಅಭ್ಯಾಸ ಮಾಡುವುದು – ನವಜಾತ ಶಿಶುವಿನ ಹತ್ತಿರ ಹೋಗುವ ಮೊದಲು ಪ್ರತಿಯೊಬ್ಬರೂ ಕೈ ಮತ್ತು ಮುಖ ತೊಳೆದಿದ್ದಾರೆಯೇ ಖಚಿತಪಡಿಸಿಕೊಳ್ಳಿ. ನವಜಾತ ಶಿಶುವಿಗೆ ಉತ್ತಮ ನೈರ್ಮಲ್ಯ ಅಭ್ಯಾಸಗಳು ಸಹ ಪ್ರಯೋಜನಕಾರಿ. ಆದ್ದರಿಂದ ನೀವು ಆಗಾಗ ಸ್ನಾನ ಮಾಡಬೇಕು ಮತ್ತು ಶಿಶುಗಳ ನೈರ್ಮಾಲ್ಯ ವಸ್ತ್ರವನ್ನು ಅಗತ್ಯವಿದ್ದಾಗ ಬದಲಾಯಿಸಬೇಕು.
7. ನವಜಾತ ಶಿಶುವನ್ನು ಧೂಳಿನಿಂದ ರಕ್ಷಿಸಿ – ನಿಮ್ಮ ನವಜಾತ ಶಿಶು ಕೋಣೆಯಲ್ಲಿದ್ದಾಗ, ಅಲ್ಲಿ ಧೂಳು ಹಿಡಿಯುವುದನ್ನು ಅಥವಾ ಸ್ವಚ್ಛ ಗೊಳಿಸುವುದನ್ನು ತಪ್ಪಿಸಿ. ನೀವು ಸೊಳ್ಳೆ ನಿವಾರಕವನ್ನು ಬಳಸಿದರೆ, ರಾಸಾಯನಿಕದಿಂದ ಮಗುವಿಗೆ ಕಿರಿಕಿರಿ ಉಂಟಾಗುತ್ತದೆ ಆದ್ದರಿಂದ ಸಾವಯವ ಬಳಕೆ ಖಚಿತಪಡಿಸಿಕೊಳ್ಳಿ.
8. ಪ್ರಾಮ್ ಕವರ್‌ಗಳನ್ನು ಬಳಸಿ – ನಿಮ್ಮ ನವಜಾತ ಶಿಶುವನ್ನು ಹೊರಗೆ ಕರೆದೊಯ್ಯುವಾಗಲೆಲ್ಲಾ, ಹೊರಗಿನ ಮಾಲಿನ್ಯ ಮತ್ತು ನಿಮ್ಮ ಮಗುವಿನ ನಡುವೆ ಪ್ರಾಮ್ ಕವರ್ (ಮೇಲೆಹೊದಿಕೆಯ ಚಿಕ್ಕ ಹಾಸಿಗೆ) ತಡೆಗೋಡೆಯಾಗಿ ಕಾರ್ಯನಿರ್ವಹಿಸುವುದರಿಂದ ಪ್ರಾಮ್ ಕವರ್ ಬಳಸಿ
9. ಒಳಾಂಗಣ ಸಸ್ಯಗಳು – ಮನಿ ಪ್ಲಾಂಟ್, ಅಲೋ ವೆರಾ, ಪೀಸ್ ಲಿಲಿ ಮತ್ತು ಬಿದಿರಿನ ಪಾಮ್‌ನಂತಹ ಸಸ್ಯಗಳು ನೈಸರ್ಗಿಕ ವಾಯು ಶುದ್ಧೀಕರಣಗಳಾಗಿವೆ. ನಮ್ಮಿಂದ ಹೊರಹಾಕಲ್ಪಟ್ಟ ಇಂಗಾಲದ ಡೈಆಕ್ಸೈಡ್ ಅನ್ನು ಈ ಸಸ್ಯಗಳು ತಾಜಾ ಆಮ್ಲಜನಕವಾಗಿ ಪರಿವರ್ತಿಸುತ್ತವೆ. ಅವು ಗಾಳಿಯನ್ನು ಮಾಲಿನ್ಯದಿಂದ ಮುಕ್ತವಾಗಿಸುತ್ತವೆ, ಹೀಗಾಗಿ, ಮನೆಯಲ್ಲಿ ಕೆಲ ಸಸ್ಯಗಳನ್ನು ಬೆಳೆಸುವುದು ಒಳ್ಳೆಯದು.
10. ನಿಮ್ಮ ನವಜಾತ ಶಿಶುವಿಗೆ ಚರ್ಮದ ರಕ್ಷಣೆಯ ಕಟ್ಟುಪಾಡು ಅನುಸರಿಸಿ–ಮಾಲಿನ್ಯವು ನಿಮ್ಮ ಮಗುವಿನ ಚರ್ಮವನ್ನು ಒಣಗಿಸಿ ಅಲರ್ಜಿಗೆ ಗುರಿಯಾಗಿಸಬಹುದು. ಆದ್ದರಿಂದ, ಅವರಿಗೆ ಸರಿಯಾದ ಚರ್ಮದ ರಕ್ಷಣೆ ನಿಯಮ ಅನುಸರಿಸುವುದು ಬಹಳ ಮುಖ್ಯ. ಆಲ್ಕೋಹಾಲ್, ಪ್ಯಾರಾಬೆನ್ ಮತ್ತು ರಾಸಾಯನಿಕ ರಹಿತ ಉತ್ಪನ್ನ ಬಳಸಿ. ಅಲ್ಲದೆ, ಶುಷ್ಕತೆ ತಪ್ಪಿಸಲು ಉತ್ಕೃಷ್ಟ ಮಾಯಿಶ್ಚರೈಸರ್ ಬಳಸಿ.

ಈ ಸಲಹೆಗಳನ್ನು ಅನುಸರಿಸುವುದರಿಂದ ನಿಮ್ಮ ನವಜಾತ ಶಿಶುವನ್ನು ಮಾಲಿನ್ಯದ ಕಠಿಣ ಪರಿಣಾಮಗಳಿಂದ ರಕ್ಷಿಸಲು ಸಹಾಯ ಮಾಡುತ್ತದೆ.

ಹೃದಯಕ್ಕಾದ ಗಾಯವನ್ನು ವಾಸಿಮಾಡುವ ಅಂಟು!

ಅಭಿವ್ಯಕ್ತಿ

ಎಲ್.ಪಿ. ಕುಲಕರ್ಣಿ
kulkarnilp007@gmail.com

ತಗೋಳೇ ತಗೋಳೇ, ನನ್ನೇ ತಗೋಳೇ, ಹೃದಯ ಬೇಕಾ,ಹೃದಯವಂತ ಬೇಕಾ.....

ಇದೇನಿದು ಅಂತಿರಾ, 2002ರಲ್ಲಿ ತೆರೆಕಂಡ ಸ್ಯಾಂಡಲ್ ವುಡ್‌ನ ರಿಯಲ್ ಸ್ಟಾರ್ ಉಪೇಂದ್ರ ನಟಿಸಿದ 'ಸೂಪರ್ ಸ್ಟಾರ್' ಚಿತ್ರದ ಹಾಡು. ಈ ಹಾಡಿನಂತೆಯೇ ನೋವು, ಹತಾಶೆ ಭಾವಗಳನ್ನು ಹೃದಯಕ್ಕಾದ ಗಾಯವೆಂದು ಪರಿಭಾವಿಸಿ ಬಿಂಬಿಸಲಾಗುತ್ತದೆ. ಇದು ಭಾವನಾತ್ಮಕ ಸಂಗತಿಯಾಯಿತು. ಆದರೆ ನಿಜವಾಗಿ ಹೃದಯಕ್ಕೆ ಗಾಯವಾದರೆ ಏನು ಮಾಡುವುದು? ಎಂಬ ಪ್ರಶ್ನೆಗೆ ಈಗ ವಿಜ್ಞಾನಿಗಳಿಂದ ಉತ್ತರ ಸಿಕ್ಕಿದೆ. ಅದೇನಂತಿರಾ, ನೇರಳಾತೀತ ವಿಕಿರಣ (ಯು.ವಿ ರೇಸ್) ಉಪಸ್ಥಿತಿಯಲ್ಲಿ ತಯಾರಿಸಿದ ಒಂದು ಅಂಟು ಪದಾರ್ಥ ಹೃದಯಕ್ಕಾದ ಗಾಯವನ್ನು ವಾಸಿಮಾಡುತ್ತದೆ. ಚೀನಾದ ಜಿಜಿಯಾಂಗ್ ವಿಶ್ವವಿದ್ಯಾಲಯದ ಪ್ರೊ.ಹೋಂಗ್ವೈ ಹೋಯಾಂಗ್ ಮತ್ತು ಆತನ ಸಹಚರರು ಸೇರಿ ನೀರು ಮತ್ತು ಪಾಲಿಮರ್ ಒಂದನ್ನು ಬಳಸಿ ಇಂತಹದೊಂದು ಅಂಟನ್ನು (ಗ್ಲೂ) ತಯಾರಿಸಿದ್ದಾರೆ. Gel MA/ HA&NB/LAP ಹೈಡ್ರೊಜೆಲ್ ಮತ್ತು ಫೈಬ್ರಿನ್ ಗ್ಲೂ, ಸಿಎ ಮತ್ತು ಸರ್ಗಿಫ್ಲೊ ಮುಂತಾದವುಗಳಿಂದ ತಯಾರಾದ ಈ ವಸ್ತುವನ್ನು ಹೃದಯಕ್ಕಾದ ಗಾಯಕ್ಕೆ ಲೇಪಿಸಿದಾಗ ಏಳೆಂಟು ದಿನಗಳಲ್ಲಿ ಗಾಯ ಮಾಯ್ದು ಮೊದಲಿನ ಹಾಗೆ ಮೆದು ಚರ್ಮ ಬರುತ್ತದಂತೆ. ಅಂದಹಾಗೆ ಈ ಅಂಟಿನಂಥ ಪದಾರ್ಥದ ಲೇಪನವನ್ನು ಮನುಷ್ಯನ ಹೃದಯದ ಗಾಯಕ್ಕೆ ಹಚ್ಚಿ ಪ್ರಯೋಗಿಸಿದ್ದಾರೆಯೇ ಎಂಬ ಪ್ರಶ್ನೆ ಉದ್ಭವವಾಗುವುದು ಸಹಜ. ಸದ್ಯ ಇದಕ್ಕೆ ಇಲ್ಲವೆಂದೇ ಉತ್ತರ ಬರುತ್ತದೆ. ಹಾಗಾದರೆ ಯಾರ ಹೃದಯದ ಗಾಯಕ್ಕೆ ಇದನ್ನು ಲೇಪಿಸಿ ಪ್ರಯೋಗಿಸಿದ್ದಾರೆಂದು ತಿಳಿಯಲು ಹೊರಟರೆ ಆಗ ಬರುವುದೇ ವರಾಹ. ಅರ್ಥಾತ್ ಹಂದಿ. ಹೌದು, ಈ ಪ್ರಯೋಗಕ್ಕಾಗಿ ಬರೋಬ್ಬರಿ 4 ಹಂದಿಗಳನ್ನು ಪ್ರೊ.ಹೋಂಗ್ವೈ ಹೋಯಾಂಗ್ ಮತ್ತು ಆತನ ತಂಡದವರು ಬಳಸಿಕೊಂಡಿದ್ದಾರೆ. ಹಂದಿಗಳ ಹೃದಯದ ಎಡ ಕುಹರದ ಮೇಲೆ ಸೂಜಿಗಳಿಂದ ತಿರುಚಿನ ಗಾಯಮಾಡಿ, ನೇರಳಾತೀತ (ಯು.ವಿ) ಬೆಳಕಿನ ಇರುವಿಕೆಯಲ್ಲಿ ಈ ಕೃತಕ ಅಂಟನ್ನು ಲೇಪಿಸಿದ್ದಾರೆ. ಅಂಟು ಲೇಪಿಸಿದ ಕೇವಲ 30 ಸೆಕೆಂಡುಗಳಲ್ಲಿ ಗಾಯದಿಂದ ರಕ್ತ ಸ್ರಾವ ನಿಂತಿದೆಯಂತೆ. 'ಹೀಗೆ ರಕ್ತ ನಿಂತು ಎರಡು ವಾರಗಳಲ್ಲಿ ಗಾಯವೆಲ್ಲಾ ಮಾಯವಾಗಿ, ಹೃದಯದ ಕೋಶಗಳು ಮೊದಲಿನಂತೆ ಕಾರ್ಯನಿರ್ವಹಿಸಿವೆ. ಆದರೆ ಗಾಯದ ಜಾಗದಲ್ಲಿ ಅಲ್ಪಪ್ರಮಾಣದ ನೋವು ಕಾಣಿಸಿಕೊಂಡಿದೆ.' ಎಂಬುದಾಗಿ ಪ್ರೊ.ಹೋಯಾಂಗ್ ಹೇಳುತ್ತಾರೆ. 'ಈ ಅಂಟಿನ ಹಾಗೆ ಇಷ್ಟು ಬೇಗ ಹೃದಯ ಗಾಯ ವಾಸಿಮಾಡುವ ಯಾವ ಔಷಧಿಯನ್ನೂ ಇದುವರೆಗೂ ಕಂಡುಹಿಡಿಯಲಾಗಿಲ್ಲ, ಅಲ್ಲದೇ, ಅಂಟಿನಿಂದ ವಾಸಿಯಾದ ಗಾಯದಲ್ಲಿನ ಕೋಶಗಳ ಗಟ್ಟಿತನ ಹೇಗಿದೆಯೆಂದರೆ, ಸಾಮಾನ್ಯ ರಕ್ತದೊತ್ತಡಕ್ಕಿಂತಲೂ ಎರಡುಪಟ್ಟು ಹೆಚ್ಚು ರಕ್ತದೊತ್ತಡ ಗಾಯವಾದ ಸಂದರ್ಭದಲ್ಲಿ ಇದ್ದರೂ ಕೂಡ ಹೃದಯ ಸ್ನಾಯುಗಳಿಗೆ ಯಾವುದೇ ಹಾನಿಯಾಗುವುದಿಲ್ಲ, ಇದರ ಅರ್ಥ, ಹೃದಯದಲ್ಲಿ ಪ್ರತೀ ಕ್ಷಣ ರಕ್ತ ಪಂಪಾಗಿ ದೇಹದ ಎಲ್ಲ ಭಾಗಗಳಿಗೂ ಹೋಗುವುದಲ್ಲದೆ, ಮರಳಿ ಹೃದಯಕ್ಕೆ ಬರುವ ಸಂದರ್ಭದಲ್ಲೂ ಯಾವ ತೊಂದರೆಯೂ ಆಗುವುದಿಲ್ಲ.' ಎಂದೂ ಸಹ ಪ್ರೊ. ಹೋಯಾಂಗ್ ಮತ್ತು ಅವರ ತಂಡ ಹೇಳುತ್ತದೆ. ಅಲ್ಲದೇ ಈ ಅಂಟು ಪದಾರ್ಥದ ಜೈವಿಕ ವಿಘಟನೀಯತೆ (ಬಯೋಡಿಗ್ರೆಡೆಬಿಲಿಟಿ) ಪರೀಕ್ಷಿಸಲು. ಅಂದರೆ ಈ ಅಂಟು ಜೀವಿಗಳ ದೇಹದಲ್ಲಿ ಎಷ್ಟು ದಿನಗಳಲ್ಲಿ ವಿಘಟನೆಗೊಳ್ಳುತ್ತದೆ ಎಂದು ತಿಳಿಯುವುದು. ಅದಕ್ಕಾಗಿ ಹೆಗ್ಗಣಗಳ ಒಳ ಚರ್ಮದಲ್ಲಿ ಸೂಜಿಗಳಿಂದ ಈ ಅಂಟು ಪದಾರ್ಥವನ್ನು ಹಾಯಿಸಿದ್ದಾರೆ. 8 ವಾರಗಳ ನಂತರ ಚರ್ಮದ ಒಳಗೆ ಕೇವಲ ಶೇ 20ರಷ್ಟು ಮಾತ್ರ ಈ ಅಂಟು ಇರುವುದನ್ನು ಕಂಡುಕೊಂಡಿದ್ದಾರೆ. ಒಟ್ಟಾರೆ ಈ ಎಲ್ಲ ಬೆಳವಣಿಗೆಗಳಿಂದ ತಿಳಿಯುವುದೇನೆಂದರೆ, ಮುಂದೊಂದು ದಿನ ಮನುಷ್ಯನ ಹೃದಯಕ್ಕಾದ ಗಾಯಕ್ಕೂ ಸಹ ಈ ಅಂಟು ಪದಾರ್ಥವನ್ನು ಲೇಪಿಸಿ ಗಾಯ ವಾಸಿ ಮಾಡಿ ವೈದ್ಯಕೀಯ ಲೋಕದಲ್ಲಿ ಒಂದು ಹೊಸ ಮೈಲುಗಲ್ಲನ್ನು ಪ್ರೊ.ಹೊಯಾಂಗ್ ಮತ್ತು ತಂಡದವರು ಸೃಷ್ಟಿಸಲು ಹೊರಟಿದ್ದಾರೆ ಎನ್ನುವುರಲ್ಲಿ ಯಾವ ಸಂಶಯವೂ ಇಲ್ಲ.

ಮಹಾ ಸರಕಾರಕ್ಕೆ ಮತ್ತೆ ಸಿಬಿಐ ಕಂಟಕ

ಮುಂಬೈ ಡೈರಿ

ಶ್ರೀನಿವಾಸ ಜೋಕಟ್ಟೆ ಮುಂಬೈ
vveditoped@gmail.com

ರಾಷ್ಟ್ರೀಯ ತನಿಖಾ ಏಜನ್ಸಿ (ಎನ್‌ಐಎ) ಸಿಬಿಐ, ಎನ್‌ಸಿಬಿ(ನಾರ್ಕೊಟಿಕ್ಸ್ ಕಂಟ್ರೋಲ್ ಬ್ಯೂರೋ) ಇಡಿ..ಎಲ್ಲ ಪ್ರಮುಖ ತನಿಖಾ ಏಜೆನ್ಸಿಗಳೆಲ್ಲ ಮುಂಬೈಯಲ್ಲಿ ತಮ್ಮ ತನಿಖಾ ಕಾರ್ಯಗಳಲ್ಲಿ ಬ್ಯುಸಿ ಇವೆ. ಕಳೆದ ವರ್ಷ ಬಾಲಿವುಡ್‌ನಲ್ಲಿ ಸುಶಾಂತ್ ಸಿಂಗ್ ರಾಜಪುತ್ ಸಾವಿನ ನಂತರ ಅದರ ತನಿಖೆಯನ್ನು ಬಿಹಾರ ಪೊಲೀಸ್, ಮುಂಬೈ ಪೊಲೀಸ್ ಆರಂಭದಲ್ಲಿ ಮಾಡಲು ಹೊರಟರೆ ಅವರೊಳಗೆ ವಿವಾದ ಸೃಷ್ಟಿಯಾಗಿ ಮುಂದಿನ ತನಿಖೆಯನ್ನು ಸಿಬಿಐಗೆ ಹಸ್ತಾಂತರಿಸಲಾಯಿತು. ಆದರೆ ಒಂಬತ್ತು ತಿಂಗಳು ಕಳೆದರೂ ಸುಶಾಂತ್ ಸಿಂಗ್ 'ಸಾವು' ಕೊಲೆಯೋ ಆತ್ಮಹತ್ಯೆಯೋ ಎಂದು ಇನ್ನೂ ತೀರ್ಪು ಬರಲಿಲ್ಲ. ಈ ತನಿಖೆ ದಿಕ್ಕು ಅನಂತರ 'ಬಾಲಿವುಡ್‌ನಲ್ಲಿ ಡ್ರಗ್ಸ್' ಎಂಬತ್ತ ತಿರುಗಿ 'ಎನ್‌ಸಿಬಿ'ಯಿಂದ ಡ್ರಗ್ಸ್ ಸುದ್ದಿಯೇ ವಿಜೃಂಭಿಸಿದ್ದು, ಸುಶಾಂತ್ ಸಾವಿನ ತನಿಖಾ ಪ್ರಕರಣ ಸದ್ಯ ತಣ್ಣಗಾಗಿ ಬಿಟ್ಟಿದೆ.

ಸುಶಾಂತ್ ಪ್ರಕರಣದಲ್ಲಿ ಸಿಬಿಐ ಇನ್ನೂ ತನ್ನ ತನಿಖೆಯ ಫಲಿತಾಂಶ ಹೇಳದಿದ್ದರೂ ಇದೀಗ ಮಹಾರಾಷ್ಟ್ರದ ಮಾಜಿ ಗೃಹಮಂತ್ರಿ ಅನಿಲ್ ದೇಶ್ ಮುಖ್ ಮತ್ತು ಪೊಲೀಸ್ ಇಲಾಖೆಯ 100 ಕೋಟಿ ರೂಪಾಯಿ 'ವಸೂಲಿ' ಪ್ರಕರಣದ ತನಿಖೆಯನ್ನು ಹೈಕೋರ್ಟ್ ಸಿಬಿಐಗೆ ಒಪ್ಪಿಸಿದ್ದರಿಂದ ಮತ್ತೆ 15 ದಿನಗಳ ಕಾಲ ಸಿಬಿಐ ಮುಂಬಯಿಯಲ್ಲಿ ಬ್ಯುಸಿ ಇರಲಿದೆ. ಸಿಬಿಐ ಎಲ್ಲರಿಗಿಂತ ಮೊದಲು ಮಾಜಿ ಪೊಲೀಸ್ ಕಮಿಶನರ್ ಪರಮ್ ಬೀರ್ ಸಿಂಗ್ ಅವರಿಗೆ ಪ್ರಮುಖ ಹತ್ತು ಪ್ರಶ್ನೆ ಕೇಳುವ ಮೂಲಕ ತನಿಖೆ ಆರಂಭಿಸಲು ಮುಂದಾಗಿದೆ. ಇನ್ನೊಂದೆಡೆ ಮಾಜಿ ಗೃಹಮಂತ್ರಿ ಅನಿಲ್ ದೇಶ್ ಮುಖ್ ಪ್ರಕರಣದಲ್ಲಿ ಹೈಕೋರ್ಟ್ ತೀರ್ಪಿನ ವಿರುದ್ಧ ಮಹಾರಾಷ್ಟ್ರ ಸರಕಾರವು ಸುಪ್ರೀಂ ಕೋರ್ಟ್‌ಗೆ ಹೋಗಿದೆ.

ವಿಶೇಷ ಅಂದ್ರೆ ಮಹಾವಿಕಾಸ ಆಘಾಡಿಯಲ್ಲಿ ಈ ಮೊದಲು ಗೃಹಮಂತ್ರಿ ಆಗಲು ಒಪ್ಪದಿದ್ದ ದಿಲೀಪ್ ವಲ್ಸೆ ಪಾಟೀಲ್ ಅವರೇ ಈಗ ರಾಜ್ಯದ ಹೊಸ ಗೃಹಮಂತ್ರಿ ಆಗಿದ್ದಾರೆ ! ದೇಶ್‌ಮುಖ್ ರಾಜೀನಾಮೆ ನೀಡಿದ ನಂತರ ಮಹಾವಿಕಾಸ ಆಘಾಡಿ ಸರಕಾರದಲ್ಲಿ ಹೊಂದಾಣಿಕೆ ಅಭಾವ ಕಾಣುತ್ತಿದೆ. ಶಿವಸೇನೆ ದೇಶ್ ಮುಖ್ ರಾಜೀನಾಮೆಯನ್ನು ಬಹಳ ಹಿಂದೆಯೇ ಇಚ್ಛಿಸಿತ್ತು. ಆದರೆ ಎನ್‌ಸಿಪಿ ಒತ್ತಡದ ಕಾರಣ ಉದ್ಧವ್ ಠಾಕ್ರೆ ಕಠೋರ ಕ್ರಮ ಕೈಗೊಳ್ಳಲು ಹೋಗಿರಲಿಲ್ಲ, ಅತ್ತ ಕಾಂಗ್ರೆಸ್ ಮಹಾವಿಕಾಸ ಆಘಾಡಿಯಲ್ಲಿದ್ದೂ ಅದಕ್ಕೆ ಯಾವ ಪ್ರಯೋಜನವೂ ಇಲ್ಲದಂತಾಗಿದೆ.

ಮಹಾರಾಷ್ಟ್ರ ಕಳೆದ ವರ್ಷದಂತೆ ಈ ವರ್ಷವೂ ಕರೊನಾ ಹಾಟ್‌ಸ್ಪಾಟ್ ಆಗಿದ್ದು ಸರಕಾರ ಈಗಾಗಲೇ ಟೆನ್ಷನ್‌ನಲ್ಲಿದ್ದರೆ ಈಗ ಗೃಹ ಇಲಾಖೆ ತನಿಖೆಯನ್ನು ಸಿಬಿಐ ತನಿಖೆಗೆ ಒಳಪಡಿಸಲು ಹೈಕೋರ್ಟ್ ಆದೇಶಿಸಿರುವುದು ಉದ್ಧವ್ ಸರಕಾರಕ್ಕೆ ಮತ್ತೊಂದು ಹೊಡೆತ ಬಿದ್ದಿದೆ. ಸಾಮ್ನಾ ಪತ್ರಿಕೆಯಲ್ಲಿ ವಾಝೆ ಬಗ್ಗೆ ಸುದ್ದಿಗಳು ಈಗೀಗ ಬರ್ತಿಲ್ಲ, ಕರೊನಾ ಬಗ್ಗೆ ಸರಕಾರದ ಹೆಜ್ಜೆಗಳನ್ನೇ ಹೇಳುತ್ತಿದೆ. ಮೊನ್ನೆ ಮೊನ್ನೆವರೆಗೆ ಗೃಹಮಂತ್ರಿಯಾಗಿದ್ದ ಅನಿಲ್ ದೇಶಮುಖ್‌ರನ್ನು ಸಮರ್ಥಿಸುತ್ತಿದ್ದ ಶರದ್ ಪವಾರ್ ಸೋಮವಾರ ಕೊನೆಗೂ ರಾಜೀನಾಮೆ ನೀಡು ಎಂದರು.

ಭಾರತದಲ್ಲಿ ನಾವು ಮೊದಲ ಬಾರಿ ಪೊಲೀಸರೇ ಬಾಂಬ್ ಪ್ಲಾಂಟ್ ದೃಶ್ಯವನ್ನು ಸೃಷ್ಟಿಸಿರುವುದು, ರಾಜ್ಯದ ಮಂತ್ರಿಯೊಬ್ಬರು ವಸೂಲಿಗಾಗಿ ಪೊಲೀಸ್ ಕಮಿಶನರ್‌ಗೆ ಒತ್ತಡ ಹಾಕಲು ಹೊರಟದ್ದು ಬಹುಷಃ ಅದು ಮಹಾರಾಷ್ಟ್ರದಲ್ಲಿ ಮಾತ್ರ ಇರಬೇಕು. ಇದನ್ನು ವಿಪಕ್ಷ ಮಾತ್ರವಲ್ಲ ಇಲ್ಲಿಯ ಮುಂಬೈಕರ್ ಕೂಡ ಹೇಳುತ್ತಿದ್ದಾರೆ. ಗೃಹ ಮಂತ್ರಿಯಾಗಿದ್ದ ಅನಿಲ್ ದೇಶಮುಖ್ ಅವರಿಗೆ ಸಾಮ್ನಾ ಪತ್ರಿಕೆ ಕಳೆದ ವಾರದ ಸಂಚಿಕೆಯಲ್ಲಿ ಸಂಪಾದಕ, ಶಿವಸೇನೆ ನೇತಾ ಸಂಜಯ್ ರಾವುತ್ ಅವರು ತನ್ನ ಅಂಕಣದಲ್ಲಿ ಇದು 'ಡ್ಯಾಮೇಜ್ ಕಂಟ್ರೋಲ್' ನ ದುರ್ಗತಿ. ಎಂದು ಬರೆದಿದ್ದರು. ಸಚಿನ್ ವಾಝೆ ಹೆಸರಿನ ಸಹಾಯಕ ಪೊಲೀಸ್ ನಿರೀಕ್ಷಕನಿಗೆ ಇಷ್ಟೊಂದು ಮಹತ್ವ ಹೇಗೆ ಬಂತು? ಒಬ್ಬ ಗೃಹ ಮಂತ್ರಿಗೆ ಪೊಲೀಸ್ ಇಲಾಖೆಯಲ್ಲಿ ಏನು ನಡೆಯುತ್ತಿದೆ ಎನ್ನುವುದು ಗೊತ್ತಿಲ್ಲ ಎಂದು ಹೇಳುವುದನ್ನು ನಂಬುವ ಮಾತೇ? ಈ ರೀತಿ ಬರೆದ ನಂತರ ಶಿವಸೇನೆ ಮತ್ತು ಎನ್‌ಸಿಪಿ ನಾಯಕರ ನಡುವೆ ಒಂದಷ್ಟು ವಿವಾದ ನಡೆದದ್ದೂ ಹೌದು.

63 'ಕ್ರಿಮಿನಲ್'ಗಳನ್ನು ಎನ್‌ಕೌಂಟರ್‌ನಲ್ಲಿ ಕೊಂದಿರುವ 'ಸ್ಪೆಶಲಿಸ್ಟ್' ಪೊಲೀಸ್ ಅಧಿಕಾರಿ ಸಚಿನ್ ವಾಝೆ ಉದ್ಯಮಿ ಮುಖೇಶ್ ಅಂಬಾನಿಯ ಎಂಟಿಲಿಯಾ ಸಮೀಪ ಸ್ಕಾರ್ಪಿಯೋದಲ್ಲಿ ಜಿಲೆಟಿನ್ ಕಡ್ಡಿಗಳನ್ನು ಇರಿಸಿದ ಕೇಸ್‌ನಲ್ಲಿ ಮತ್ತು ಮನ್ಸುಖ್ ಹಿರೇನ್ ವ್ಯಾಪಾರಿ ಹತ್ಯೆಯ ಕೇಸ್‌ನಲ್ಲಿ ಸಸ್ಪೆಂಡ್ ಆಗಿದ್ದು, ಎನ್‌ಐಎ ತಂಡ ಎಪ್ರಿಲ್ 7 ರವರೆಗೆ ತನ್ನ ಕಸ್ಟಡಿಯಲ್ಲಿರಿಸಿದೆ. ಎನ್‌ಕೌಂಟರ್ ಸ್ಪೆಶಲಿಸ್ಟ್ ಪೊಲೀಸ್ ಅಧಿಕಾರಿ ವಾಝೆಯನ್ನು ಆತನ 'ಸ್ನೇಹಿತ' ಮನ್ಸುಖ್ ಹಿರೇನ್ ಕೊಲೆಯಾಗುವ ತನಕದ ಎಲ್ಲ ಹಿಸ್ಟರಿಗಳನ್ನು ಎನ್‌ಐಎ ಒಂದೊಂದೇ ಬಿಚ್ಚಿಡುತ್ತಿದೆ.

ಹತ್ಯೆಯಾದ ವ್ಯಾಪಾರಿ ಮನ್ಸುಖ್ ಹಿರೇನ್ ಗೆ ಥಾಣೆಯಲ್ಲಿ ಕಾರು ಡೆಕೊರೇಟರ್ ಅಂಗಡಿ ಇದೆ. ಅಂದಿನಿಂದಲೂ ಸಚಿನ್ ವಾಝೆ ಪರಿಚಿತ. 1990ರಲ್ಲಿ ಸಚಿನ್ ವಾಝೆಯ ಮೊದಲ ಪೋಸ್ಟಿಂಗ್ ಥಾಣೆಯಲ್ಲೇ ಆಗಿತ್ತು. ಇದರಲ್ಲಿ ಮುಂಬ್ರಾ ಮತ್ತು ನೌಪಾಡಾ ಪೊಲೀಸ್ ಸ್ಟೇಷನ್ ಬರುತ್ತದೆ. ನೌಪಾಡದಲ್ಲೇ ಹಿರೇನ್ ಅವರ ಕಾರು ಡೆಕೊರೇಟರ್ ಅಂಗಡಿ ಇದೆ. ಅಲ್ಲಿಂದ ಇಬ್ಬರಿಗೂ ಪರಿಚಯ. ವಾಝೆಯಂತಹ ಒಬ್ಬ 'ಎಪಿಐ'ಗೆ ಹಲವಾರು ಭವ್ಯ ವಾಹನಗಳು, ಮೂರು ಕಂಪನಿಗಳು, ಒಂದು ಸ್ಟಾರ್ ಹೊಟೇಲ್‌ನಲ್ಲಿ 19ನೇ ಮಾಳಿಗೆ ರೂಮು ನಂಬರ್ 1964ರಲ್ಲಿ 100ದಿನಕ್ಕೆ ರೂಮ್ ಬುಕ್, ಅದೂ ಒಬ್ಬ ಪೊಲೀಸ್ ಅಧಿಕಾರಿಯಾಗಿ ನಕಲಿ ಐಡಿ ಪ್ರೂಫ್ ತೋರಿಸಿದ್ದು, ರಾಮ ರಾಮ ಇನ್ನೇನೆಲ್ಲ ಈ 'ಕ್ರಿಮಿನಲ್' ಎನ್‌ಕೌಂಟರ್ ಸ್ಪೆಶಲಿಸ್ಟ್ ಮಾಡಿದ್ದನೋ ಅವೆಲ್ಲ ಇನ್ನಷ್ಟು ತನಿಖೆಯಿಂದ ಹೊರಬರಬೇಕಿದೆ. ಮುಂಬೈಯ ಎನ್‌ಕೌಂಟರ್ ಸ್ಪೆಶಲಿಸ್ಟ್ ಎನ್ನುವ ಒಬ್ಬ ಅಧಿಕಾರಿಯೇ ಇಷ್ಟು ಕ್ರಿಮಿನಲ್ ಅಂದ್ರೆ ಈತ ಯಾವ 'ಕ್ರಿಮಿನಲ್'ಗಳನ್ನು ಎನ್‌ಕೌಂಟರ್‌ನಲ್ಲಿ ಹತ್ಯೆ ಮಾಡಿದ್ದನೋ?

ಬಾಂಬ್ ಬ್ಲಾಸ್ಟ್ ಆರೋಪಿ ಖ್ವಾಜಾ ಯೂನಸ್ ಕಸ್ಟಡಿ ಸಾವು ಕೇಸ್‌ನಲ್ಲಿ 2004ರಲ್ಲಿ ಸಚಿನ್ ವಾಝೆಯ ಬಂಧನವೂ ಆಗಿತ್ತು. ಅನಂತರ ಆತ ಅಮಾನತುಗೊಂಡ. ಆಗ ಥಾಣೆ ಕ್ಷೇತ್ರದಲ್ಲಿ ಆತ ಒಂದು ಲೀಗಲ್ ಕಂಪನಿ ತೆರೆದ. ಇದು ಹಿರೇನ್ ಅಂಗಡಿ ಪಕ್ಕದಲ್ಲೇ ಇತ್ತು. ಹಾಗಾಗಿ ಪೊಲೀಸ್ ಇಲಾಖೆಯಲ್ಲಿ ಇಲ್ಲದಿದ್ದರೂ ವಾಝೆ ಹಿರೇನ್‌ರ ಅಂಗಡಿಗೆ ಬರುತ್ತಿದ್ದನಂತೆ. ಇದೀಗ ಸ್ನೇಹಿತನನ್ನೇ ಕೊಲೆಮಾಡಿಸಿದ ಆ ಘಟನೆ ತನಿಖೆ ನಡೆಯುತ್ತಿದೆ. ಅಂಡರ್‌ವರ್ಲ್ಡ್‌ನಲ್ಲಿ ಯಾರಿಗೆ ಯಾರು ಪರಿಚಯ, ಅಥವಾ ಯಾರಿಗೆ ಯಾರು ಶತ್ರು ಎನ್ನುವುದು ಹೇಳುವುದೇ ಕಷ್ಟ. ಮಹಾರಾಷ್ಟ್ರ ಎಟಿಎಸ್ ನಿಂದ ಹಿರೇನ್ ಹತ್ಯೆ ತನಿಖೆಯನ್ನು ಈವಾಗ ಎನ್‌ಐಎಗೆ ಹಸ್ತಾಂತರಿಸಿದ್ದರಿಂದ ವಾಝೆ ಸಹಿತ ಮುಂಬೈ ಪೊಲೀಸ್ ಇಲಾಖೆಯ ಕೆಲವಾರು ಅಧಿಕಾರಿಗಳ ಗುಟ್ಟುಗಳು ಹೊರಬೀಳುತ್ತಿವೆ.

ಅತ್ತ ಸಿಎಸ್‌ಟಿ ರೈಲ್ವೆ ಸ್ಟೇಷನ್, ಮೀಟಿ ನದಿ, ಮುಂಬ್ರಾ ಖಾಡಿ, ಎಂಟಿಲಿಯಾ ಕಟ್ಟಡದ ಎದುರು..... ಹೀಗೆ ಸಚಿನ್ ವಾಝೆಯನ್ನು ಘಟನೆ ನಡೆದಲ್ಲಿಗೆ ಕರೆದೊಯ್ದು ರೂಪಾಂತರ ದೃಶ್ಯಗಳಿಗೆ ಎನ್‌ಐಎ ಸುತ್ತಾಡಿಸಿದ್ದೆ ಸುತ್ತಾಡಿಸಿದ್ದು! ಅಂತೂ ಮಹಾರಾಷ್ಟ್ರ ಗೃಹಮಂತ್ರಿ ಕೊನೆಗೂ ರಾಜೀನಾಮೆ ನೀಡಿದರು. ಹಾಗೆ ನೋಡಿದರೆ ಗೃಹಮಂತ್ರಿ ವಿರುದ್ಧ ಯಾವ ಪೊಲೀಸ್ ಸ್ಟೇಷನ್‌ನಲ್ಲಿ ಎಫ್‌ಐಆರ್ ದಾಖಲಿಸುತ್ತಾರೆ? ಇಲ್ಲ, ಹಾಗಾಗಿ ಸಿಬಿಐ ಈ ಪ್ರಕರಣದಲ್ಲಿ ಯಾವುದೇ ಎಫ್‌ಐಆರ್ ದಾಖಲಿಸದೇ ತನಿಖೆ ಮಾಡುವಂತೆ ಸೋಮವಾರ ಹೈಕೋರ್ಟ್ ಸೂಚಿಸಿದೆ. ಈ ಘಟನೆ ಬಗ್ಗೆ ಮೂವರು ಕೋರ್ಟಿಗೆ ಹೋಗಿದ್ದರು. ವಕೀಲೆ ಜಯಶ್ರೀ ಪಾಟೀಲ್ ಅವರು ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲು ಹೋದರೆ ಪೊಲೀಸರು ದಾಖಲಿಸಿಲ್ಲ ಎಂದಿದ್ದಾರೆ.

ಇದೊಂದು ಅಭೂತಪೂರ್ವ ಪ್ರಕರಣ. ಅನಿಲ್ ದೇಶ್‌ಮುಖ್ ಪೊಲೀಸ್ ವಿಭಾಗವನ್ನು ಲೀಡ್ ಮಾಡುವ ಕಾರಣ ಪೊಲೀಸರು ಸರಿಯಾದ ತನಿಖೆ ಮಾಡುವುದಕ್ಕೆ ಸಾಧ್ಯವಿಲ್ಲ, ಹೀಗಾಗಿ ಎಫ್‌ಐಆರ್ ದಾಖಲಿಸದೇ ಪ್ರಕರಣದ ತನಿಖೆ ಮಾಡಿ 15 ದಿನಗಳಲ್ಲಿ ತನ್ನ ಪ್ರಾಥಮಿಕ ವರದಿ ಸಿಬಿಐ ನೀಡಬೇಕು ಎಂದಿದೆ ಹೈಕೋರ್ಟ್. ಸಿಬಿಐ ಅಧಿಕಾರಿಗಳು ಮುಂಬೈಗೆ ಬಂದಿದ್ದಾರೆ. ಅವರು ಒಮ್ಮೆಲೇ ಗೃಹ ಮಂತ್ರಿ ವಿಚಾರಣೆ ಮಾಡೋದಿಲ್ಲ. ಮೊದಲಿಗೆ ಮಾಜಿ ಪೊಲೀಸ್ ಕಮಿಷನರ್ ಪರಮ್ ಬೀರ್ ಸಿಂಗ್ ಅವರಿಗೇ ಪ್ರಶ್ನೆಗಳನ್ನು ಕೇಳಲಿದ್ದಾರೆ–

ಸಚಿನ್ ವಾಝೆ, ಗೃಹಮಂತ್ರಿ ನೂರು ಕೋಟಿ ರೂಪಾಯಿಯ ಕಲೆಕ್ಷನ್ ಮಾಡಿಕೊಡುವ ಕುರಿತಂತೆ ನಿಮಗೆ ತಿಳಿಸಿದಾಗ ನೀವು ಇರಿಸಿದ ಮೊತ್ತಮೊದಲ ಹೆಜ್ಜೆ ಯಾವುದು? ನೀವು ಈ ವಸೂಲಿ ಪ್ರಕರಣವನ್ನು ನಿಲ್ಲಿಸಲು ಪ್ರಯತ್ನಿಸಿದಿರೇ? ಇಲ್ಲವೇ? ನೀವು ಎಫ್‌ಐಆರ್ ಅಥವಾ ದೂರು ದಾಖಲಿಸಲು ಯಾಕೆ ಹೋಗಿಲ್ಲ? 16 ವರ್ಷ ಸಸ್ಪೆಂಡ್ ಆದ ಪೊಲೀಸ್ ಅಧಿಕಾರಿ ಸಚಿನ್ ವಾಝೆಯನ್ನು ಯಾವ ಆಧಾರದಲ್ಲಿ ಮತ್ತೆ ಪೊಲೀಸ್ ಇಲಾಖೆಗೆ ಸೇರಿಸಿದ್ದೀರಿ? ಇದರಲ್ಲಿ ನಿಮ್ಮ ಪಾತ್ರ ಏನು? ಕ್ರೈಂಬ್ರಾಂಚ್‌ನಲ್ಲಿ ಹಲವು ಸೀನಿಯರ್‌ಗಳು ಇದ್ದ ಹೊರತೂ ವಾಝೆಯನ್ನು ಸಿಐಯು ಮುಖ್ಯಸ್ಥನನ್ನಾಗಿ ಯಾಕೆ ಮಾಡಿದಿರಿ? ಪ್ರೋಟೋಕಾಲ್ ಕಡೆಗಣಿಸಿ ವಾಝೆ ನೇರ ನಿಮಗೆ ಯಾಕೆ ರಿಪೋರ್ಟ್ ಮಾಡಿದರು? ವಾಝೆ ಜಾಯಿನ್ ಆದ ನಂತರ ಅವರಿಗೆ ಯಾವ ಮಹತ್ವಪೂರ್ಣ ಕೇಸುಗಳನ್ನೆಲ್ಲ ಒಪ್ಪಿಸಿದ್ದೀರಿ?

ಓರ್ವ ಅಸಿಸ್ಟೆಂಟ್ ಪೊಲೀಸ್ ಇನ್ಸ್‌ಪೆಕ್ಟರ್ ಆಗಿರುವ ಹೊರತಾಗಿಯೂ ಅವರ ಕಾರ್ಯಾಚರಣೆಗಳ ಬಗ್ಗೆ ನಿಮಗೆ ಸಂದೇಹವೇ ಉಂಟಾಗಲಿಲ್ಲ ಯಾಕೆ? ಎಂಟಿಲಿಯಾ ಜಿಲೆಟಿನ್ ಕೇಸಿನ ಮಾಹಿತಿ ಸಿಕ್ಕಿದ ನಂತರವೂ ವಾಝೆಗೆ ಇದರ ತನಿಖೆಯನ್ನು ಯಾಕೆ ಒಪ್ಪಿಸಿದಿರಿ? ಸಚಿನ್ ವಾಝೆಗೆ ಸ್ಪೆಷಲ್ ಪವರ್ ನೀಡುವಲ್ಲಿ ಯಾವುದಾದರೂ ರಾಜಕಾರಣಿ ನಿಮಗೆ ಒತ್ತಡ ಹಾಕಿದ್ದಾರೆಯೋ? ಇಂತಹ ಪ್ರಶ್ನೆಗಳನ್ನು ಮಾಜಿ ಪೊಲೀಸ್ ಕಮಿಷನರ್ ಪರಮ್ ಬೀರ್‌ಗೆ ಸಿಬಿಐ ಕೇಳಲಿದೆ. ಈಗ ಗೃಹಮಂತ್ರಿ ದೇಶ್ ಮುಖ್ ರಾಜೀನಾಮೆಯಿಂದ ಮಹಾವಿಕಾಸ ಆಘಾಡಿ ಸಮಸ್ಯೆ ಸಮಾಪ್ತಿ ಆಗುವ ಬದಲು ಇನ್ನಷ್ಟು ಹೆಚ್ಚಬಹುದು.

ಅಂತೂ ಈ ಪೊಲೀಸ್ ಅಧಿಕಾರಿಗಳ ಸ್ನೇಹ ಮಾಡುವುದಕ್ಕೆ ಯಾರೂ ಹೋಗಬಾರದು. ಆದಷ್ಟು ಅವರಿಂದ ದೂರ ಇರಬೇಕು ಎನ್ನವುದಕ್ಕೆ ಎನ್ ಕೌಂಟರ್ ಸ್ಪೆಶಲಿಸ್ಟ್ ಸಚಿನ್ ವಾಝೆ ಮತ್ತು ವ್ಯಾಪಾರಿ ಮನ್ಸುಖ್ ಹಿರೇನ್‌ರ ಕೊಲೆ ಪ್ರಕರಣ ಒಂದು ಪಾಠ. ಈ ಸಮಯ ಎಂಟಿಲಿಯಾ ಕೇಸ್‌ನಲ್ಲಿ ತನಿಖೆ ಸಾಧಾರಣ ಪೂರ್ಣಗೊಂಡ ನಂತರ ಎನ್‌ಐಎ ಈಗ ಜಿಲೆಟಿನ್ ತುಂಬಿಸಿದ ಸ್ಕಾರ್ಪಿಯೋದ ಮಾಲೀಕ ಮನ್ಸುಖ್ ಹಿರೇನ್‌ರ ಹತ್ಯೆ ತನಿಖೆ ತೀವ್ರಗೊಳಿಸುತ್ತಿದೆ. ಈ ಘಟನೆಗೆ ಸಂಬಂಧಿಸಿ 8 ಕಾರು, ಒಂದು ಬೈಕ್ ಈಗಾಗಲೇ ಜಪ್ತಿ ಮಾಡಲಾಗಿದೆ. ಮನ್ಸುಖ್ ಹಿರೇನ್ ಹತ್ಯೆಯ ನಂತರ ಸಚಿನ್ ವಾಝೆಯ ಬಳಿ ಇನೋವಾ, ಮರ್ಸಿಡಿಸ್, ಲ್ಯಾಂಡ್ ಕೂಸರ್,ಆಡಿ, ವೋಲ್ವೋ. ಇಂತಹ ಎಂಟು ಬೆಲೆ ಬಾಳುವ ವಾಹನಗಳು ದೊರೆತಿವೆ. ಇದೆಲ್ಲ ಹೇಗೆ ಸಾಧ್ಯ? ಎಟಿಎಸ್ ವ್ಯಾಪಾರಿ ಹಿರೇನ್ ಹತ್ಯೆ ಕೇಸ್‌ನ ತನ್ನ ತನಿಖೆಯಲ್ಲಿ ಮಾಜಿ ಕಾನ್‌ಸ್ಟೇಬಲ್ ವಿನಾಯಕ ಶಿಂಧೆ ಮತ್ತು ಬುಕ್ಕಿ ನರೇಶ್ ಗೋರೆಯನ್ನು ಬಂಧಿಸಿದೆ.

ಫೆಬ್ರವರಿ 25 ರಂದು ಎಂಟಿಲಿಯಾ ಹೊರಗಡೆ ಸ್ಕಾರ್ಪಿಯೋದಲ್ಲಿ ಜಿಲೆಟಿನ್ ಸಿಕ್ಕಿದ ನಂತರ ಮುಂಬೈ ದೇಶದ ಗಮನವನ್ನು ತನ್ನತ್ತ ಸೆಳೆದಿದೆ. ಈಗ ಸಿಬಿಐ ಮುಂಬೈ ಪ್ರವೇಶಿಸಿದ್ದು ಸುಶಾಂತ್ ಸಿಂಗ್ ತನಿಖೆ ರೀತಿಯಲ್ಲಿ ಇದರ ಫಲಿತಾಂಶ ಕಾಣದಿರಲಿ. ಹೇಗೂ ಹೈಕೋರ್ಟ್ 15 ದಿನದೊಳಗೆ ವರದಿ ಕೇಳಿದೆ. ನೋಡೋಣ.

ಕರೋನಾ ತಂದ ತಲ್ಲಣಗಳು ಮತ್ತು ಕಲಿಸಿದ ಪಾಠಗಳು...

ಪ್ರಚಲಿತ

ಡಾ. ಕರವೀರಪ್ರಭು ಕ್ಯಾಲಕೊಂಡ
vveditoped@gmail.com

ಟ್ವೆಂಟಿ– 20 ಮರೆಯಬೇಕಾದ, ಬರೆಯಲಾಗದ ವರ್ಷ. ವಿಶ್ವವನ್ನು ದುರಂತ ಸ್ವಪ್ನದಂತೆ ಕಾಡಿದ ವರ್ಷ. ನಮ್ಮ ಕೈಗಳನ್ನು ನಾವೇ ನಂಬದಂತೆ ಮಾಡಿದ, ನಮ್ಮ ಮುಖವನ್ನು ನಾವೇ ಮರೆಸಿಕೊಳ್ಳುವಂತೆ ಮಾಡಿದ ವರ್ಷ. ಕೋವಿಡ್–19 ಹೊರತುಪಡಿಸಿ ಉಳಿದುದೆಲ್ಲಾ ಹಿನ್ನೆಲೆಗೆ ಸರಿದ ವರ್ಷ. ಬಹಳಷ್ಟು ಜನರು ತಮ್ಮ ಜೀವಿತಕಾಲದಿಂದ ಅಳಿಸಲು ಬಯಸುವ 2020, ನಾವು ಮರೆಯಬಾರದ, ಮನನ ಮಾಡಿಕೊಳ್ಳಲೇಬೇಕಾದ ಪಾಠಗಳನ್ನೂ ಎದುರಿಗಿಟ್ಟಿದೆ.

ಚೀನಾ ಸದ್ದಿಲ್ಲದೇ ಮೂರನೇ ಮಹಾಯುದ್ಧ ಮಾಡಿತು. ಮದ್ದು ಗುಂಡು ಹಾರಿಸಲಿಲ್ಲ, ರಾಕೆಟ್ಟುಗಳು ರೊಯ್ಯಂದು ಹಾರಾಡಲಿಲ್ಲ, ಕಡಲಲ್ಲಿ ಹಡಗುಗಳು ಓಡಾಡಲಿಲ್ಲ, ಕಣ್ಣಿಗೆ ಕಾಣದ ವೈರಸ್ ಇಡೀ ಜಗತ್ತನ್ನೇ ನಡುಗಿಸಿತು. ವಕ್ ನೇ ಕಿಯಾ, ಕ್ಯಾ ಹಸೀನ್ ಸಿತಮ್, ತುಮ್ ರಹೇ ನ ತುಮ್, ಹಮ್ ರಹೇ ನ ಹಮ್ –1959ರಲ್ಲಿ, ಕೈಫಿ ಅಜ್ಮಿಯವರು 'ಕಾಗಜ್ ಕೆ ಫೂಲ್ 'ಚಿತ್ರಕ್ಕಾಗಿ ಬರೆದ ಈ ಹಾಡು, ಕರೋನಾ ವೈರಸ್ ದಾಳಿ ಕಲ್ಪಿಸಿಕೊಂಡೇ ಸೃಷ್ಟಿಸಿರಬಹುದು ಎನಿಸುತ್ತದೆ. ಸಮಯದ ದೆಸೆಯಿಂದ ನೀನು ನೀನಾಗಿಲ್ಲ, ನಾನು ನಾನಾಗಿಲ್ಲ 'ಎಂಬ ಇದರ ಅರ್ಥ ಈಗಿನ ಸ್ಥಿತಿಗೆ ಸರಿಹೊಂದುವಂತಿದೆ. ಕರೋನಾ ಸೋಂಕಿನಿಂದ ವಿಶ್ವ ಅನುಭವಿಸುತ್ತಿರುವ ನೋವು, ನಷ್ಟಗಳನ್ನು ಏಳು ವರ್ಷಗಳ ಹಿಂದೆಯೇ ಮೈಕ್ರೊಸಾಫ್ಟ್ ಕಂಪನಿ ಸಂಸ್ಥಾಪಕ ಬಿಲ್ ಗೇಟ್ಸ್ ಟೆಡ್‌ಟಾಕ್‌ನಲ್ಲಿ ಚರ್ವಿತ ಚರ್ವಿತ ಚರ್ಚಿಸಿದ್ದಾರೆ. ವಿಶ್ವವನ್ನು ನಡುಗಿಸುವುದು ಅಣ್ವಸ್ತ್ರವಲ್ಲ, ಬದಲಾಗಿ ಕಣ್ಣಿಗೆ ಕಾಣದ ಒಂದು ಸೂಕ್ಷ್ಮಾಣು ಜೀವಿ ಎಂಬ ಎಚ್ಚರಿಕೆ ನೀಡಿದ್ದರು.

ಕರೋನಾ ಮಹಾಮಾರಿ ಇಡೀ ಜಗತ್ತು ಬಹಳ ತೊಂದರೆಗೊಳಗಾಯಿತು. ಹಿಂದೆಂದೂ ಕಂಡರಿಯದ ಸಾವು ನೋವು ಹಾಗೂ ಆರ್ಥಿಕ ಸಂಕಷ್ಟ ಎಲ್ಲಾ ದೇಶಗಳನ್ನು ಬಾಧಿಸಿದವು. ಕೇಂದ್ರ ಸರಕಾರ 2020ರ ಮಾರ್ಚ್ 24ರಿಂದ 21ದಿನಗಳ ವರೆಗೆ ಲಾಕ್ ಡೌನ್ ಘೋಷಿಸಿತು. ಅಂಗಡಿ ಮುಗ್ಗಟ್ಟು, ವ್ಯಾಪಾರ ವಹಿವಾಟು, ವಿಮಾನ, ರೈಲು, ಬಸ್‌ಸೇವೆಗಳು, ಶಾಲೆ ಕಾಲೇಜು, ಆಫೀಸು, ಮಂದಿರ ಮಸೀದೆ ಚರ್ಚ.ಹೀಗೆ ಎಲ್ಲವನ್ನೂ ಮುಚ್ಚಲಾಯಿತು. ಮನೆಯೇ ಮಂತ್ರಾಲಯವಾಯಿತು. ಕರೋನಾ ಹರಡುವುದನ್ನು ಗಮನಿಸಿದ ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಗಳು ಲಾಕ್ ಡೌನ್ ಮುಂದುವರಿಸಿದವು. ಇದರ ಪರಿಣಾಮ ಉದ್ಯಮಗಳು ನೆಲಕಚ್ಚಿದವು. ಕೈಗಾರಿಕೆಗಳು ನಿಂತು ಹೋದವು. ಕೋಟ್ಯಾಂತರ ಜನರು ಉದ್ಯೋಗಗಳನ್ನು ಕಳೆದುಕೊಂಡರು.

ಮನೆಯೇ ಮೊದಲ ಪಾಠಶಾಲೆ, ಜನನಿ ತಾನೆ ಮೊದಲ ಗುರು ಎಂಬ ನಾಣ್ನುಡಿ ಎಲ್ಲರಿಗೂ ಗೊತ್ತಿರುವಂಥದ್ದೆ. ಆದರೆ, ಕರೋನಾ ಕಾಲದಲ್ಲಿ ಮಕ್ಕಳು ಮನೆಯಲ್ಲಿಯೇ ಇರಬೇಕಾದ ಸಂದರ್ಭವನ್ನು ಅರಗಿಸಿಕೊಳ್ಳುವುದೇ ಅನೇಕ ಪೋಷಕರಿಗೆ ಕಷ್ಟವಾಗಿತ್ತು. ದಿನದ ಇಪ್ಪತ್ನಾಲ್ಕು ತಾಸೂ ಮನೆಯಲ್ಲಿಯೇ ಇರಬೇಕಾದ ಮಕ್ಕಳನ್ನು ಸಂಭಾಳಿಸುವುದು ದೊಡ್ಡ ಸಮಸ್ಯೆಯಾಗಿತ್ತು. ಕರೋನಾ ಕಾರಣದಿಂದ ವಿಶ್ವದ 186 ದೇಶಗಳಲ್ಲಿನ ಶಾಲಾ ಕಾಲೇಜುಗಳು ಮುಚ್ಚಿದ್ದು, 130 ಕೋಟಿಗೂ ಅಧಿಕ ವಿದ್ಯಾರ್ಥಿಗಳು (ಜಗತ್ತಿನ ಶೇ.72ರಷ್ಟು) ಶಾಲಾ ಶಿಕ್ಷಕರಿಂದ ವಂಚಿತರಾಗಿರುವುದು ಮಾಧ್ಯಮ ವರದಿಗಳಿಂದ ತಿಳಿಯುತ್ತದೆ.

ಕರೋನಾ ಕಾರಣದಿಂದ ಜಾಗತಿಕ ಆರ್ಥಿಕತೆ ಕುಸಿಯಿತು. ಆಯಾತ ನಿರ್ಯಾತಗಳೂ ಕುಸಿದವು. ಭಾರತದಲ್ಲಿ ಲಾಕ್‌ಡೌನ್ ಘೋಷಣೆ ಮಾಡಿದುದಂತೂ ಗಾಯದ ಮೇಲೆ ಬರೆ ಎಳೆದಂತೆ ಆಯಿತು. ದೇಶದ ಆರ್ಥಿಕತೆ, ಜಿಡಿಪಿ, ಜನರ ಆದಾಯ ಕುಸಿದವು.ಲಾಕ್ ಡೌನ್ ಮಾಡುವಾಗ ಇದು ನಿರೀಕ್ಷಿತವೇ ಆಗಿತ್ತು. ದೇಶದ ಆರ್ಥಿಕತೆಗಿಂತ ಜನರ ಪ್ರಾಣರಕ್ಷಣೆಗೇ ಸರಕಾರ ಹೆಚ್ಚು ಮಹತ್ವವನ್ನು ಕೊಟ್ಟು ಲಾಕ್ ಡೌನ್ ಜಾರಿಗೊಳಿಸಿತ್ತು. ಸೆನ್ಸೆಕ್ಸ್, ಜಿಡಿಪಿ ಎಲ್ಲವೂ ಪಾತಾಳಕ್ಕೆ ಇಳಿದವು.

ಹೊಸದಾಗಿ ಬಡತನದ ಯಾದಿಗೆ ಸೇರುವವರ ಬಳಿ ಬಡತನ ಎದುರಿಸುವ ಕೌಶಲ ಇರುವುದಿಲ್ಲ. ಅದನ್ನು ಕಲಿಯಲು ಅವರಿಗೆ ಆಗುವುದೂ ಇಲ್ಲ. ಬಡತನ ಒಂದು ಮಾನಸಿಕ ಸ್ಥಿತಿಯಾಗಿರಬಹುದು. ಆದರೆ, ನೀಗಿಸಬೇಕಾದದ್ದು ಒಂದು ದೈಹಿಕ ಅವಶ್ಯಕತೆ. ತೀರಾ ಇತ್ತೀಚಿನವರೆಗೆ, ಹೆಚ್ಚುತ್ತಿದ್ದ ನವ ಶ್ರೀಮಂತರ ಸಂಖ್ಯೆ ಬಗ್ಗೆ ಅಭಿಮಾನ ಪಡುತ್ತಿದ್ದ ದೇಶಗಳು ಈಗ ಇದ್ದಕ್ಕಿದ್ದಂತೆಯೇ ನವ ಬಡತನದೊಂದಿಗೆ ಸೆಣೆಸುವ ಮಾರ್ಗಗಳನ್ನು ಆವಿಷ್ಕರಿಸಲು ಹೆಣಗಾಡುತ್ತಿವೆ. ಹಾಗೆಂದು ಹೊಸ ಬಡತನ ಪ್ರಪಂಚಕ್ಕೇನೂ ಹೊಸದಲ್ಲ, ಅದು ಭಾರೀ ಪ್ರಮಾಣದಲ್ಲಿ ಸೃಷ್ಟಿಯಾದ ಸನ್ನಿವೇಶಗಳನ್ನು ಚರಿತ್ರೆಯಲ್ಲಿ ಕಾಣುತ್ತೇವೆ. ದೊಡ್ಡ ದೊಡ್ಡ ಯುದ್ಧಗಳಾದಾಗ, ಆರ್ಥಿಕ ಹಿಂಜರಿತ ತೀವ್ರವಾದಾಗ, ಆವರೆಗೆ ಇದ್ದ ನೆಮ್ಮದಿ ಬದುಕು ಇದ್ದಕ್ಕಿದ್ದಂತೆಯೇ ದುರ್ಭರವಾಗಿದ್ದಿದೆ. ಶಿವರಾಮ ಕಾರಂತರ 'ಮುಗಿದ ಯುದ್ಧ ',ಅನುಪಮಾ ನಿರಂಜನರ 'ನೂಲು ನೇಯ್ದ ಚಿತ್ರ '.....ಇತ್ಯಾದಿ ಕೃತಿಗಳೆಲ್ಲಾ ಇಂತಹ ವಸ್ತುಗಳ ಸುತ್ತವೇ ಹುಟ್ಟಿಕೊಂಡಿರುವುದು.

ಬೆಳಗಾದರೆ ಕೆಲಸಕ್ಕೆ ಹೋಗುವ ತರಾತುರಿಯಲ್ಲಿ ಮನೆಗಳು ಕಾರ್ಖಾನೆಗಳ ರೂಪ ತಾಳುವ ಚಿತ್ರಗಳು ಲಾಕ್ ಡೌನ್ ಸಂದರ್ಭದಲ್ಲಿ ತೆರೆಮರೆಗೆ ಸರಿದವು. ಸಾಫ್ಟವೇರ್ ಉದ್ಯೋಗಿಗಳಿಗೆ ಪರಿಚಿತವಾಗಿದ್ದ 'ವರ್ಕ್ ಫ್ರಂ ಹೋಮ್ 'ವಿವಿಧ ಕ್ಷೇತ್ರಗಳ ಉದ್ಯೋಗಿಗಳಿಗೂ ದೊರೆಯಿತು. ಇದರಿಂದಾಗಿ ಮನೆಗಳು ಕಚೇರಿಗಳ ರೂಪ ತಾಳಿದವು. ವಿಚಿತ್ರ ಮೌನ ಮನೆಗಳನ್ನು ಆವರಿಸಿಕೊಂಡಿತು. ವರ್ಕ ಫ್ರಂ ಹೋಮ್ ಕೆಲವು ಉದ್ಯೋಗಿಗಳಿಗೆ ವಿಶೇಷವಾಗಿ ಮಹಿಳಾ ಉದ್ಯೋಗಿಗಳಿಗೆ ಅನುಕೂಲವನ್ನೂ ಒದಗಿಸಿತು. ಮಹಾನಗರ ಪ್ರದೇಶಗಳಲ್ಲಿ ಕಚೇರಿಗೆ ಹೋಗಿ ಬರುವ ಪ್ರಯಾಣದ ಸಮಯ ಉಳಿದದ್ದು ಅನೇಕರಿಗೆ ಬೋನಸ್ ದೊರೆತಂತಾಯಿತು. ಆದರೆ, ಇನ್ನೂ ಕೆಲವರಿಗೆ ಮನೆಯಿಂದ ಕೆಲಸ ಮಾಡುವುದು ಒತ್ತಡವಾಗಿ ಪರಿಣಮಿಸಿದ್ದೂ ಇದೆ.

ಅಂತ್ಯಸಂಸ್ಕಾರದ ವೇಳೆ ನಡೆದ ಘಟನೆಗಳು ಭವಿಷ್ಯದಲ್ಲಿ ಜನರಲ್ಲಿ ಇನ್ನಷ್ಟು ಭೀತಿ ಹುಟ್ಟಿಸಬಹುದು. ಭಾರತದಲ್ಲಿ ಈಗ ಕರೋನಾ ವೈರಸ್ಸಿಗಿಂತಲೂ ಮಾನಸಿಕ ವೈರಸ್ಸು ವೇಗವಾಗಿ ಹರಡುತ್ತಿದೆ. ಹರಡಿದೆ. ಹೀಗಾಗಿ ನಾರಾಣಪ್ಪನ ಪಾರ್ಥಿವ ಶರೀರ ಅಂತ್ಯಸಂಸ್ಕಾರ ಕಾಣದೆ ಮನಸ್ಸುಗಳಲ್ಲೇ ಕೊಳೆಯುತ್ತಿದೆ. ಸಾವಿಗೂ ಒಂದು ಘನತೆ ಇದೆ. ಅದನ್ನು ಗೌರವಿಸೋಣ. ಏಕಂದರೆ 'ಇಲ್ಲಿ ಬಂದಿದ್ದು ಸುಮ್ಮನೆ, ಅಲ್ಲಿರುವುದು ನಮ್ಮನೆ'ಎಂಬ ದಾಸರ ನುಡಿ ಇನ್ನಷ್ಟು ಸ್ಪಷ್ಟವಾಗುವಂತೆ, ವಾಸ್ತವವನ್ನು ಕೊರೊನಾ ನಮ್ಮ ಮುಂದೆ ತೆರೆದಿಡುತ್ತಿದೆ .ಪಾರ್ಥಿವ ಶರೀರವನ್ನು ಘನತೆ ಮತ್ತು ಗೌರವದಿಂದ ಸಂಸ್ಕಾರ ಮಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯ. ಈ ಹೊಣೆಯರಿತು ನಡೆಯದೆ ನಿರ್ಲಕ್ಷ್ಯದಿಂದ ವರ್ತಿಸುವುದು ಸಂಸ್ಕಾರಹೀನ ನಡವಳಿಕೆ ಮಾತ್ರವಲ್ಲ, ಅಕ್ಷಮ್ಯ ಸಹ.

ಕೊರೊನಾ ಕಾಲದಲ್ಲಿ ಸ್ಯಾನಿಟೈಜರ್, ಮಾಸ್ಕ್ ಮುಂತಾದ ವಸ್ತುಗಳ ಮಾರಾಟ ಏರಿಕೆಯಾಗಿದ್ದು ತಿಳಿದಿದೆ .ಆದರೆ ,ದೇಶದಲ್ಲಿ ಲೈಂಗಿಕ ಆಟಿಗೆಗಳು ಮಾರಾಟವೂ ಶೇ.65ರಷ್ಟು ಹೆಚ್ಚಾಗಿದೆ ಎಂಬ ವಿಚಾರ ಬಹಳಷ್ಟು ಜನರಿಗೆ ತಿಳಿದಿರಲಾರದು .2018 ರಲ್ಲಿ ಹಿಂದಿಯಲ್ಲಿ 'ಲಸ್ಟ ಸ್ಟೋರೀಸ್ 'ಎಂಬ ಸಿನಿಮಾ ತೆರೆ ಕಂಡಿತ್ತು. ಮಹಿಳೆಯೊಬ್ಬರು ಲೈಂಗಿಕ ಕಾಮನೆ ಈಡೇರಿಸಿಕೊಳ್ಳಲು 'ರಿಮೋಟ್ ಕಂಟ್ರೋಲ್ ವೈಬ್ರೇಟರ್' ಅನ್ನು ಬಳಸುತ್ತಿರುವುದನ್ನು ಅದರಲ್ಲಿ ತೋರಿಸಲಾಗಿತ್ತು. ಇದಾದ ನಂತರ ಮಹಿಳೆಯರಿಗಾಗಿ ಇರುವ ಲೈಂಗಿಕ ಆಟಿಗೆಗಳಿಗಾಗಿ ಇಂಟರ್ ನೆಟ್‌ನಲ್ಲಿ ಶೋಧ ನಡೆಸುವವರ ಸಂಖ್ಯೆ ಒಮ್ಮೆಲೇ ಏರಿಕೆ ಕಂಡಿತ್ತು. ಲಾಕ್‌ಡೌನ್ ಸಂದರ್ಭದಲ್ಲಿ ಇಂಥ ಆಟಿಗೆಗಳ ಖರೀದಿ ಪ್ರಮಾಣವು ಶೇ. 65ರಷ್ಟು ಏರಿಕೆಯಾಗಿದೆ ಎಂದು 'ದಾಟ್ಸ್ ಪರ್ಸನಲ್ ಡಾಟ್ ಕಾಂ 'ಸಂಸ್ಥೆಯ ವರದಿ ಹೇಳಿದೆ.



ಕರೋನಾ ಕಾಲದಲ್ಲಿ ವೈದ್ಯ ಮತ್ತು ರೋಗಿಯ ನಡುವೆ ಅಪನಂಬಿಕೆಯ ಕಂದಕವೇ ಸೃಷ್ಟಿಯಾಯಿತು. ಖಾಸಗಿ ಆಸ್ಪತ್ರೆಗಳು ಜನರ ಸುಲಿಗೆ ಮಾಡುತ್ತವೆ ಎನ್ನುವ ಭಾವನೆ ಕರೋನಾ ಪೂರ್ವದಲ್ಲೂ ಜನರ ಮನಸ್ಸಿನಲ್ಲಿತ್ತು. ಈ ಭಾವನೆ ಲಾಕ್‌ಡೌನ್ ಸಮಯದಲ್ಲಿ ಆತಂಕವಾಗಿ ಬದಲಾಯಿತು. ಕರೋನಾ ಕಾರಣದಿಂದ ಖಾಸಗಿ ಆಸ್ಪತ್ರೆಗೆ ದಾಖಲಾದ ಕೆಲವರು, ಕಾಯಿಲೆಗಿಂತ ಹೆಚ್ಚಾಗಿ ಲಕ್ಷಾಂತರ ರೂಪಾಯಿ ಮೊತ್ತದ ಬಿಲ್ ನೋಡಿಯೇ ಹೈರಾಣಾದ ಪ್ರಸಂಗ ಎಲ್ಲೆಡೆ ವರದಿಯಾದವು. ಸರಕಾರ ಮಧ್ಯಪ್ರವೇಶಿಸಿ, ಬೆಲೆ ನಿಗದಿಪಡಿಸಿದರೂ ಪರಿಸ್ಥಿತಿ ಬದಲಾಗಲಿಲ್ಲ, ಸಾಯುವುದಾದರೆ ಮನೆಯಲ್ಲೇ ಸಾಯೋಣ ಎಂದು ಆರೋಗ್ಯ ಸಮಸ್ಯೆ ತಲೆದೋರಿದರೂ ನಿರ್ಲಕ್ಷಿಸುವವರ ಸಂಖ್ಯೆ ಹೆಚ್ಚಾಯಿತು. ನಕಲಿ ವೈದ್ಯರೂ ಹೆಚ್ಚಾದರು. ಈ ಸಮಸ್ಯೆಯ ಇನ್ನೊಂದು ತುದಿಯಲ್ಲಿ, ವೈದ್ಯರು ಹಾಗೂ ವೈದ್ಯಕೀಯ ಸಿಬ್ಬಂದಿ 'ಕರೋನಾ ವಾರಿಯರ್ಸ್'ಆಗಿ ಕೆಲಸ ಮಾಡಿ ಸಾಕಷ್ಟು ಸಂಕಷ್ಟ ಎದುರಿಸಬೇಕಾಯಿತು. ಸೋಂಕಿನ ಆತಂಕದ ನಡುವೆ ಬಿಡುವಿಲ್ಲದ ದುಡಿಮೆ ಅವರ ಮೈಮನಗಳನ್ನು ಗಾಸಿಗೊಳಿಸಿತು. ಕೆಲಸ–ಕ್ವಾರಂಟೈನ್ ನಡುವೆ ಖಾಸಗಿ ಬದುಕೇ ಇಲ್ಲವಾಯಿತು. ಜಾಗತಿಕ ಆರೋಗ್ಯ ಸಂಸ್ಥೆ ಯ ಎಲ್ಲ ಸುರಕ್ಷಾ ಮಾರ್ಗಸೂಚಿ ಪಾಲಿಸಿದರೂ, ಕೆಲವು ವೈದ್ಯರು ಮತ್ತು ವೈದ್ಯಕೀಯ ಸಿಬ್ಬಂದಿ ಸೋಂಕಿಗೊಳಗಾಗಿ ಹುತಾತ್ಮರಾದರು.

ಲಾಕ್ ಡೌನ್ ಸಮಯದಲ್ಲಿ ಕೌಟುಂಬಿಕ ಹಿಂಸೆಯ ಘಟನೆಗಳು ಹೆಚ್ಚಾಗಿ, ದೌರ್ಜನ್ಯಕ್ಕೊಳಗಾದ ದೂರುಗಳು ಸಾಮಾನ್ಯ ಸಂದರ್ಭಗಳಿಗಿಂತಲೂ ದುಪ್ಪಟ್ಟು ಪ್ರಮಾಣದಲ್ಲಿ ವರದಿಯಾಗುತ್ತಿವೆ. ಸಾಂಕ್ರಾಮಿಕವು ಎಲ್ಲಾ ವರ್ಗದ ವ್ಯಕ್ತಿಗಳ ಮೇಲೆ ತೀವ್ರ ಪರಿಣಾಮ ಬೀರಿದೆ. ಜಾಗತಿಕ ಪಟ್ಟಕ್ಕಾಗಿ ಪೈಪೋಟಿ ಮಾಡುತ್ತಿದ್ದ ರಾಷ್ಟ್ರಗಳು ತಣ್ಣಗೆ ಕೂತಿವೆ. ವಿಶ್ವದಾದ್ಯಂತ ಬಹುತೇಕ ಎಲ್ಲಾ ಭಾಗಗಳಿಗೆ ಈ ರೋಗವು ವೇಗವಾಗಿ ಹರಡಿರುವುದರಿಂದ ಇಡೀ ಮಾನವ ಕುಲಕ್ಕೆ ಅಗಾಧ ಆರೋಗ್ಯ, ಆರ್ಥಿಕ, ಪರಿಸರ ಮತ್ತು ಸಾಮಾಜಿಕ ಸವಾಲುಗಳು ಎದುರಾಗಿದ್ದು, ಜನರು ತಮ್ಮ ಮನಸ್ಥಿತಿ ಬದಲಾಯಿಸಿಕೊಳ್ಳುವ ಸನ್ನಿವೇಶ ಸೃಷ್ಟಿಯಾಗಿದೆ. ಕರೋನಾ ಸಮಸ್ಯೆ ಉದ್ಭವಿಸಿದ ಬಳಿಕ ಜನರ ಜೀವನ ಕ್ರಮದಲ್ಲಿ ಸಕಾರಾತ್ಮಕ ಮತ್ತು ನಕಾರಾತ್ಮಕ ಬದಲಾವಣೆ ಗಮನಿಸುತ್ತಿದ್ದೇವೆ.

ದಿನನಿತ್ಯವೂ ಗಿಜಗುಡುತ್ತಿದ್ದ ಧಾರ್ಮಿಕ ಸ್ಥಳಗಳು ಈಗ ಭಕ್ತರ ಭೇಟಿಯಿಲ್ಲದೇ ಭಣಗುಡುತ್ತಿವೆ. ಹಬ್ಬ ಹರಿದಿನಗಳು ಮನೆಗಷ್ಟೇ ಸೀಮಿತವಾಗಿದ್ದು, ಮುಂಬರುವ ಹಬ್ಬಗಳು ಕಳೆಗುಂದಲಿವೆ. ಈ ಮಧ್ಯೆ ಆನ್‌ಲೈನ್ ಪೂಜಾ ಪರಿಕಲ್ಪನೆ ಚಾಲ್ತಿಗೆ ಬಂದಿದೆ. ಶಿಕ್ಷಣ ವ್ಯವಸ್ಥೆಗೆ ಆಧುನಿಕ ಸ್ಪರ್ಶ ದೊರೆತಿದ್ದು, ಆನ್‌ಲೈನ್ ಕಲಿಕೆ ಮಹತ್ವ ಪಡೆದುಕೊಂಡಿದೆ. ಶಿಕ್ಷಣದ ಹೆಸರಿನಲ್ಲಿ ಸುಲಿಗೆ ಮಾಡುತ್ತಿದ್ದ ಶಿಕ್ಷಣ ಸಂಸ್ಥೆಗಳು ಈಗ ಆದಾಯವಿಲ್ಲದೆ ಸೊರಗಿ ಹೋಗಿವೆ. ಬಡವ ಮತ್ತು ಶ್ರೀಮಂತರೆಂಬ ಸಾಮಾಜಿಕ ಅಂತರ ಕಡಿಮೆಯಾಗಿ ಸಮಾನ ಜೀವನ ಮಾಡುತ್ತಿದ್ದಾರೆ. ಮನರಂಜನೆಗಾಗಿ ಹೊರಗಡೆ ಹೋಗುವ ಪರಿಪಾಠಕ್ಕೆ ಬ್ರೇಕ್ ಬಿದ್ದಿದೆ. ಸಣ್ಣ ಪುಟ್ಟ ಆರೋಗ್ಯದ ಸಮಸ್ಯೆಗೂ ವೈದ್ಯರ ಭೇಟಿ ಮಾಡುತ್ತಿದ್ದ ಸಾರ್ವಜನಿಕರು ಈಗ ವೈದ್ಯರಿಂದ ಅಂತರ ಕಾಯ್ದುಕೊಂಡಿದ್ದಾರೆ. ದುರಂತದ ಸಂಗತಿಯೆಂದರೆ ಕರೋನಾ ರಾಜಕಾರಣಿಗಳನ್ನು, ಅಧಿಕಾರಿಗಳನ್ನು ಜನರ ಜೀವ ಉಳಿಸುವ ನೆಪದಲ್ಲಿ ಕೋಟ್ಯಾಧಿಪತಿಗಳನ್ನಾಗಿಸಿತು. ಮಾಸ್ಕ್, ಸ್ಯಾನಿಟೈಸರ್, ಪಿಪಿಇ ಕಿಟ್ ಹೆಸರಿನಲ್ಲಿ ಭ್ರಷ್ಟರಿಗೆ ಹೊಸ ಹುಲ್ಲುಗಾವಲು ಸೃಷ್ಟಿಯಾದವು. ಸೋಂಕಿತರ ಮನೆಗಳು, ಬೀದಿಗಳನ್ನು 'ಸೀಲ್ ಡೌನ್' ಮಾಡುವ ಹೊಸ ದಂಧೆಗಳು ಸೃಷ್ಟಿಯಾದವು. ರೋಗಭೀತಿ ಸಂದರ್ಭ ಮಾನವೀಯತೆ ಅನಾವರಣಕ್ಕೂ ವೇದಿಕೆಯಾಯಿತು. ಸೋಂಕು ನಮ್ಮ ನಂಬಿಕೆಗಳ ನೆಲೆಗಟ್ಟನ್ನು ಶಿಥಿಲಗೊಳಿಸಿದೆ. ಭರವಸೆ ಬೇರುಗಳನ್ನು ಅಲುಗಾಡಿಸಿದೆ. ಬುಡಮೇಲು ಮಾಡಿದೆ. 'ಶತಮಾನದ ಪಾಠ'ಅಂತ ಯಾವುದಾದರೂ ಇದ್ದರೆ, ಅದು ಕಲಿಯುವಂತೆ ಮಾಡಿದ್ದು ಕರೋನಾ.

ಲಾಕ್‌ಡೌನ್‌ನಿಂದ ನಿಂತುಹೋದ ಜೀವನ ಅನೇಕ ಪಾಠಗಳನ್ನು ಕಲಿಸಿದೆ. ಹೊಸ ದಾರಿಯಲ್ಲಿ ನಡೆಯುವ ಕಲೆಯನ್ನು ಕಲಿಸಿದೆ. ಅನಗತ್ಯ ಖರ್ಚುಗಳನ್ನು ಮಿತಗೊಳಿಸಿದೆ. ಆದರೆ ಅದರೊಡನೆ ಅನೇಕ ಹೊಸ ಸಮಸ್ಯೆಗಳನ್ನು ಹುಟ್ಟು ಹಾಕಿದೆ. ತಲ್ಲಣ ಸೃಷ್ಟಿಸಿದೆ. ಈಗ ಅವುಗಳಿಗೆಲ್ಲ ಪರಿಹಾರ ಕಂಡುಕೊಳ್ಳಬೇಕಿದೆ. ಕರೋನೋತ್ತರ ಸಹಜ ಸ್ಥಿತಿ ಹೊಸ ರೂಪಕ್ಕೆ ನಾವೂ ರೂಪಾಂತರಗೊಳ್ಳಬೇಕಾಗಿದೆ. ಅದಕ್ಕೆ ದೃಢ ಸಂಕಲ್ಪ ಬೇಕು. ಅಂತಹ ಸಂಕಲ್ಪಕ್ಕೆ ಬೇಕಾದ ಇಚ್ಛಾಶಕ್ತಿ ಬೇಕು. ಇದು ಇಂದಿನ ಅವಶ್ಯಕತೆ. 'ಮನ್ವಂತರ 'ಧಾರಾವಾಹಿ ಶೀರ್ಷಿಕೆ ಗೀತೆ ಈ ಸಂದರ್ಭಕ್ಕೆ ಹೇಳಿ ಮಾಡಿಸಿದಂತಿದೆ .